MKN-12

Sl. No.

First Year M.A. Degree Examination, May/June - 2026

ಕನ್ನಡ

ಮಧ್ಯಕಾಲೀನ ಕನ್ನಡ ಸಾಹಿತ್ಯ

(SIM Old Scheme)

ಕೋರ್ಸ್ – II

Time : 3 Hours **Maximum Marks : 90**

Instructions to Candidates:

ಎಲ್ಲಾ ವಿಭಾಗಗಳಿಗೂ ಉತ್ತರಿಸಿ.

ವಿಭಾಗ – ಎ

ಒಂದು ಪ್ರಶ್ನೆಗೆ ಉತ್ತರಿಸಿ. **(1×15=15)**

1. ಮಧ್ಯಕಾಲೀನ ಕನ್ನಡ ಸಾಹಿತ್ಯದ ಪ್ರಕಾರಗಳನ್ನು ವಿವರಿಸಿ.

2. ಮಧ್ಯಕಾಲೀನ ಯುಗದ ಧಾರ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ವಿಶದಪಡಿಸಿ.

ವಿಭಾಗ – ಬಿ

ಎರಡು ಪ್ರಶ್ನೆಗಳಿಗೆ ಉತ್ತರಿಸಿ. **(2×15=30)**

3. ಅಕ್ಕನ ವಚನಗಳಲ್ಲಿ ಕಂಡುಬರುವ ಕಾವ್ಯಾಂಶವನ್ನು ಗುರುತಿಸಿ, ವಚನ ಸಾಹಿತ್ಯದಲ್ಲಿ ಅಕ್ಕನ ಸ್ಥಾನವನ್ನು ನಿರ್ದೇಶಿಸಿ.

4. ನಂಬಿಯಣ್ಣನ ರಗಳೆಯಲ್ಲಿ ಬರುವ ಪಾತ್ರಗಳ ಕಲಾತ್ಮಕತೆಯನ್ನು ನಿರೂಪಿಸಿ.

5. 'ಸಿದ್ಧರಾಮ ಕರ್ಮಯೋಗಿ ಮತ್ತು ಶಿವಯೋಗಿ' – ಹೇಗೆ? ವಿವರಿಸಿ.

6. ಕರ್ಣಪರ್ವದ ಕರ್ಣಾರ್ಜುನರ ಕಾಳಗವನ್ನು ಕುಮಾರವ್ಯಾಸ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ.

ವಿಭಾಗ–ಸಿ

ಮೂರು ಪ್ರಶ್ನೆಗಳಿಗೆ ಉತ್ತರಿಸಿ. **(3×10=30)**

7. ಭರತ–ಬಾಹುಬಲಿಯರ ಯುದ್ಧದ ಪ್ರಸಂಗವನ್ನು ನಿರೂಪಿಸಿ.

8. ಕನಕದಾಸರ ಕೀರ್ತನೆಗಳಲ್ಲಿನ ಭಕ್ತಿಯ ಸ್ವರೂಪವನ್ನು ವಿವರಿಸಿ.

9. ಚಂದ್ರಹಾಸನ ಕಥೆಯಲ್ಲಿ ಪ್ರತಿಪಾದಿತವಾಗಿರುವ ಹರಿಭಕ್ತಿಯ ಪರಿಯನ್ನು ವಿವೇಚಿಸಿ.

10. ಕುಮಾರವ್ಯಾಸ ಚಿತ್ರಿಸಿರುವ ಕರ್ಣನ ಪಾತ್ರವನ್ನು ವಿಶ್ಲೇಷಿಸಿ.

11. ಅಕ್ಕನ ವಚನಗಳಲ್ಲಿ ಬಿಂಬಿತವಾಗಿರುವ ಆಧ್ಯಾತ್ಮಿಕತೆಯನ್ನು ಕುರಿತು ಚರ್ಚಿಸಿ.

[P.T.O.

ವಿಭಾಗ – ಡಿ

12. ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ. **(1×5=5)**

ಅ) ಇಡೆ ತೊಟ್ಟಿಲಿಲ್ಲಾಡಿಸುವರಿಲ್ಲ ನಿನಗೆ ಪೊಂ
ದೊಡಿಗೆಯಿಲ್ಲಿರೆ ನಿಳಯಮಿಲ್ಲ ಬಿಡದೆರೆವ ನೀ
ರ್ಕುಡಿವಾಲ್ಗಳೆಣ್ಣೆ ಬೆಣ್ಣೆಗಳಿಲ್ಲ ಲಾಲಿಸಿ ನಲಿವ ತಂದೆತಾಯ್ಗಳಿಲ್ಲ
ಪೊಡವಿಪತಿ ಕೇರಳಾಧೀಶ್ವರಂ ಪರಕೆಯೊಳ್
ಪಡೆದನದಕೀಗ ನಿನ್ನಂ ನೋಡುವೆನ್ನ ಕ
ಣ್ಣೊಡೆಯದಕಟಕಟೆಂದು ಬಿಸುಸುಯ್ದಳಲ್ದು ಮರುಗುವಳಾಕೆ ದಿನದಿನದೊಳು

ಬ) ಕೊಳಲ ದನಿಗೆ ಸರ್ಪ ತಲೆದೂಗಿದಡೇನು
ಒಳಗಣ ವಿಷದ ಬಯಕೆ ಬಿಡದನ್ನಕ್ಕ?
ಹಾಡಿದಡೇನು, ಕೇಳಿದಡೇನು,
ತನ್ನಲ್ಲುಳ್ಳ ಅವಗುಣ ಬಿಡದನ್ನಕ್ಕ?
ಒಳಗನರಿದು ಹೊರಗೆ ಮರೆದವರ
ನೀ ಎನಗೆ ತೋರಯ್ಯಾ ಚೆನ್ನಮಲ್ಲಿಕಾರ್ಜುನಾ

13. ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(2×5=10)**

ಅ) ದುಷ್ಟಬುದ್ಧಿ
ಬ) ರಾಘವಾಂಕ
ಕ) ಕುಮಾರವ್ಯಾಸನ ಕೃಷ್ಣ
ಡ) ರತ್ನಾಕರ ವರ್ಣಿ
